# ಕಬ್ಬಿನಲ್ಲಿ ಕಳೆ ನಿಯಂತ್ರಣ

ಕಬ್ಬಿನ ಪ್ರಾರಂಭಿಕ ಹಂತದಲ್ಲಿನ ಬೆಳವಣಿಗೆಯು ನಿಧಾನವಾಗಿದ್ದು, ಸಾಲಿನ ಅಂತರವು ಕೂಡಾ ಹೆಚ್ಚಿಗೆ ಇದ್ದು ಮತ್ತು ಕಬ್ಬಿಗೆ ಹೆಚ್ಚಿನ ಗೊಬ್ಬರ ಹಾಕುವುದರಿಂದ ಕಳೆ ಬೆಳೆಯು ಸೂರ್ಯ ಪ್ರಕಾಶ, ಸ್ಥಳ ಹಾಗೂ ಪೋಷಕಾಂಶಗಳ ಲಾಭವನ್ನು ಪಡೆದು ಹುಲುಸಾಗಿ ಬೆಳೆಯುತ್ತದೆ. ಇದಲ್ಲದೆ ಈ ಬೆಳೆಯ ಹೆಚ್ಚಿನ ಉಷ್ಣಾಂಶ ಹಾಗೂ ತೇವಾಂಶ ಹೊಂದಿರುವ ವಾತಾವರಣವು ಕಳೆಯ ಬೆಳವಣಿಗೆಗೆ ಪೂರಕವಾಗುತ್ತದೆ. ಸಾಮಾನ್ಯವಾಗಿ ಕಬ್ಬನ್ನು ನೀರಾವರಿ ಪ್ರದೇಶಗಳಲ್ಲಿ ಬೆಳೆಯುವುದರಿಂದ ಹಾಗೂ ಕಬ್ಬಿನ ವಿವಿಧ ತಾಕುಗಳಿಗೆ ನೀರಿನ ಕಾವಲಿಗಳನ್ನು ನಿರ್ಮಿಸುವುದರಿಂದ ಕಳೆಯ ಬೀಜಗಳು ಸಾಕಷ್ಟು ಪ್ರಮಾಣದಲ್ಲಿ ಬೇರೆಬೇರೆ ತಾಕುಗಳಿಗೆ ಪಸರಿಸುತ್ತವೆ. ಆದ್ದರಿಂದ ಹಲವಾರು ಜಾತಿಯ ಕಳೆಗಳು ಕಬ್ಬಿನ ಬೆಳೆಯ ಬೆಳವಣಿಗೆಗೆ ಪೈಪೋಟಿ ಮಾಡುತ್ತವೆ. ಕಳೆಯ ನಿಯಂತ್ರಣವು ಕಳೆಯ ಜಾತಿ, ಸ್ಥಳ, ಅವಧಿ, ಮಣ್ಣು, ವಿವಿಧ ಬೇಸಾಯ ಕ್ರಮಗಳು, ಬೆಳೆಯ ಪರಿವರ್ತನೆ ಹಾಗೂ ಕಬ್ಬಿನ ಬೆಳವಣಿಗೆಯ ಹಂತಗಳ ಮೇಲೆ ಅವಲಂಬಿತವಾಗಿವೆ.

ಕಳೆಗಳು, ಮೊಳಕೆಯ ಹಂತದಿಂದಲೇ ಪೈಪೋಟಿ ನಡೆಸಿ ಬೆಳೆಯ ಬೆಳವಣಿಗೆಯನ್ನು ಕುಂಠಿತಗೊಳಿಸುವುದಲ್ಲದೇ ಇಳುವರಿ ಮತ್ತು ಸಕ್ಕರೆ ಪ್ರಮಾಣವನ್ನು ಕಡಿಮೆಗೊಳಿಸುತ್ತವೆ. ಕಬ್ಬಿನ ಬೆಳವಣಿಗೆಯು ಪ್ರಾರಂಭಿಕ ಹಂತದಲ್ಲಿ ನಿಧಾನವಾಗಿರುವುದರಿಂದ, ಈ ಸಮಯದಲ್ಲಿ ಕಳೆಗಳ ಹತೋಟಿ ಕೈಗೊಳ್ಳುವುದು ತುಂಬಾ ಫಲಪ್ರದಾಯಕವಾಗಿರುತ್ತದೆ. ಇಲ್ಲವಾದಲ್ಲಿ ಕಳೆಗಳ ತೀಕ್ಷ್ಣತೆಯಿಂದ ಕಬ್ಬಿನ ಮರಿಗಳ ಸಂಖ್ಯೆ ಕಡಿಮೆಯಾಗಿ ಇಳುವರಿ ಕುಂಠಿತಗೊಳ್ಳುತ್ತದೆ. ಕಬ್ಬಿನಲ್ಲಿ ಮರಿ ಇಡುವಿಕೆಯು ತಳಿಯ ಮೇಲೆ ಅವಲಂಬಿತವಾಗಿದ್ದರೂ, ಮುಖ್ಯವಾಗಿ ವಾತಾವರಣದ ಅಂಶಗಳಾದ ಬೆಳಕು ಹಾಗೂ ಉಷ್ಣಾಂಶಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಕಳೆಗಳ ಮುಖ್ಯ ಗುಣಧರ್ಮಗಳಾದ ಬೆಳೆಗಳಿಗಿಂತ ಅತೀ ಶೀಘ್ರದಲ್ಲಿ ಕಾಣಿಸಿಕೊಂಡು, ಬೆಳೆಗಳು ಉಪಯೋಗಿಸಿಕೊಳ್ಳಬೇಕಾದ ಸ್ವಾಭಾವಿಕ ಸಂಪತ್ತುಗಳಾದ ನೆಲ, ನೀರು ಮತ್ತು ಬೆಳಕನ್ನು ಉಪಯೋಗಿಸಿಕೊಂಡು ಹುಲುಸಾಗಿ ಬೆಳೆಯುವ್ವದು. ಮುಖ್ಯ ಬೆಳೆಗಳ ಜೊತೆ ಪೈಪೋಟಿ ನಡೆಸ್ಮತ್ತವೆ. ಸಂಶೋಧನೆಯಿಂದ ಕಂಡು ಬಂದ ಪ್ರಕಾರ ಕಳೆಗಳು ವ್ರೆದಲ 66 ದಿನಗಳಲ್ಲಿ ಬೆಳೆಗಳ ಜೊತೆ ಹೆಚ್ಚಿನ ಸಂಘರ್ಷಣೆ ಉಚಿಟು ಮಾಡುವ್ವದರಿಂದ, ಈ ಸಮಯದೊಳಗೆ ಕಳೆಗಳ ಸಮರ್ಪಕ ಹತೋಟಿ ಕೈಗೊಂಡಲ್ಲಿ ಕಳೆಗಳಿಂದಾಗುವ ನಷ್ಟವನ್ನ್ನ ತಡೆಗಟ್ಟಬಹ್ಮದು.

ನಾಟಿ ಮಾಡಿದ 35 ದಿನಗಳಲ್ಲಿ ಕಳೆಗಳು, ಕಬ್ಬಿನ ಬೆಳೆಗಿಂಗ ನಾಲ್ಕರಷ್ಟು ಸಾರಜನಕ, ರಂಜಕ ಹಾಗೂ ಎರಡೂವರೆ ಪಟ್ಟು ಪೊಟ್ಯಾಶ್ ಮತ್ತು ಕೆಲವೊಂದು ಜಾತಿಯ ಕಳೆಗಳು ಕಬ್ಬಿನ ಬೆಳೆಗಿಂಗ ಎರಡು ಪಟ್ಟು ನೀರು ಉಪಯೋಗಿಸಿಕೊಳ್ಳುವುದು ಕಂಡು ಬಂದಿದೆ.

ಕೆಲವು ಕಳೆಗಳು ಕೀಟ ಮತ್ತು ರೋಗ ಹರಡುವಿಕೆಗೆ ಆಶ್ರಯದಾತವಾಗಿವೆ. ಉದಾಹರಣೆಗೆ ಬರಮುಡಾ ಹುಲ್ಲು, ಕರಿಕೆ ಮತ್ತು ತೆಂಡೆ ಹುಲ್ಲಿನ ಕಳೆಗಳು ವ್ಯವಸಾಯ ಕ್ರಮಗಳಾದ ಬೋದು ಒಡೆಯುವಿಕೆ ಅಥವಾ ಮಣ್ಣೇರಿಸುವಿಕೆ ಹಾಗೂ ನೀರು ಹಾಯಿಸುವಿಕೆಯ ಸಂದರ್ಭದಲ್ಲಿ ಅಡೆತಡೆ ಉಂಟು ಮಾಡುತ್ತವೆ. ಸಾಮಾನ್ಯವಾಗಿ ಕಬ್ಬಿನಲ್ಲಿ ಕಂಡು ಬರುವ ಕಳೆಗಳಾವುವೆಂದರೆ.

ಏಕದಳ ಕಳೆಗಳು : ಕರಿಕೆ, ಜೇಕು, ಗಂಡುಭತ್ತ, ಕಾಡು ರಾಗಿ, ಕಡಗೋಲ, ಮುಂಡಿ, ಕಾಡುಜೋಳ, ನರಿಬಾಲದ ಹುಲ್ಲು, ಸಿಂಪಿಗನ ಹುಲ್ಲು, ಕಾಡುಜೂಟ್ ಇತ್ಯಾದಿ.

ದ್ವಿದಳ ಕಳೆಗಳು : ಹಸಿರಾಣೆ, ಅಣ್ಣಿಕಸ, ಅರದಲ್ಲಿ ಕಸ, ನೆಲನಲ್ಲಿ, ಗೋಳಿಪಲ್ಲೆ, ಹರವಿ, ಮುಳ್ಳುಹರವಿ, ಇಗಳಿ, ಜಿಗಳಿ, ಬಿಳಿಕಸ, ಬುಡ್ಡಿಕಾಯಿಕಸ, ಗೆಣತಿಕಸ, ಕುಪ್ಪಿಕಸ, ಕಾಡುಗುರೆಳ್ಳು, ಕಡ್ಲೆಮುಳ್ಳು, ಗೊರಪಲ್ಲೆ ಕಾಡುಹೆಸರು, ಭೂತನಕಸ, ಕಿರ್ಕಸಾಲಿ, ಪಾರ್ಥೇನಿಯಂ, ಮೆಕ್ಕೆಕಾಯಿ ಬಳ್ಳಿ, ಗೊಳಗೊಳಕೆ, ಕಾಕವಿ, ಗೆಣಸಿನಕಸ ಇತ್ಯಾದಿ.

ಸಂಶೋಧನೆಯಿಂದ ಕಂಡು ಬಂದ ಪ್ರಕಾರ, ಕಳೆ ಹತೋಟಿ ಮಾಡಿದ ಕಬ್ಬಿನ ಕ್ಷೇತ್ರಕ್ಕಿಂತ ಕಳೆ ಪೀಡಿತ ಕ್ಷೇತ್ರದಲ್ಲಿ ಕಳೆಗಳು ಒಂದು ಹೆಕ್ಟೇರ್ ಸಾಗುವಳಿ ಭೂಮಿಯಿಂದ 40 ಕೆ.ಜಿ. ಸಾರಜನಕವನ್ನು ಹಾಗೂ ಶೇ. 30 ರಷ್ಟು ನೀರನ್ನು ಹೆಚ್ಚಿಗೆ ಉಪಯೋಗಿಸಿಕೊಳ್ಳುವುದಲ್ಲದೆ, ಶೇ. 30 ರಿಂದ 40 ರಷ್ಟು ಕಬ್ಬಿನ ಇಳುವರಿ ಕಡಿಮೆಗೊಳಿಸಿರುವ್ವದು ಕಂಡು ಬಂದಿದೆ. ಕೃಷಿಯಲ್ಲಿ ಕಳೆಗಳ ಹಾವಳಿಯು ಇತರ ಗುಂಪುಗಳಾದ ಕೀಟ ಹಾಗೂ ರೋಗ ಬಾಧೆಗಿಂತ ತೀಕ್ಷ್ಣವಾಗಿದ್ದು ಸರಿಯಾದ ಸಮಯದಲ್ಲಿ ಹತೋಟಿ ಕೈಗೊಳ್ಳದಿದ್ದಲ್ಲಿ ಶೇ. 40 ಕ್ಕಿಂತ ಹೆಚ್ಚು ಇಳುವರಿ ಕಡಿಮೆಗೊಳ್ಳುತ್ತದೆ. ಹಾಗೇ ಮಳೆಯಾಶ್ರಿತ ಪ್ರದೇಶದಲ್ಲಿ ಬಹುವಾರ್ಷಿಕ ಕಳೆಯಾದ ಕರಿಕೆಯು ಸುಮಾರು ಶೇ. 83–85 ರಷ್ಟು ಕಬ್ಬಿನ ಇಳುವರಿಯನ್ನು ಕುಂಠಿತಗೊಳಿಸುತ್ತದೆ ಎಂಬುದು ಕಂಡುಬಂದಿದೆ. ಇದೇ ರೀತಿ ಇನ್ನುಳಿದ ಬಹುವಾರ್ಷಿಕ ಕಳೆಗಳಾದ ಜೇಕು, ಹಸಿರಾಣಿ, ಕಾಡುಕಬ್ಬುಗಳು ಕಬ್ಬಿನ ಬೇರಿನ ಬೆಳವಣಿಗೆಯನ್ನು ಕುಂಠಿತಗೊಳಿಸಿ ಕಬ್ಬಿನ ಇಳುವರಿ ಕಡಿಮೆ ಮಾಡುವವು.

ಕಳೆ ನಿಯಂತ್ರಣ ಪದ್ಧತಿಗಳು :

ಕಳೆಗಳನ್ನು ವ್ಯವಸಾಯ ಕ್ರಮಗಳಿಂದ ರಾಸಾಯನಿಕ ಕಳೆನಾಶಕಗಳಿಂದ ಮತ್ತು ಜೈವಿಕ ವಿಧಾನಗಳಿಂದ ನಿಯಂತ್ರಿಸಬಹುದಾಗಿದೆ.

1. ವ್ಯವಸಾಯ ಕ್ರಮಗಳಿಂದ :

ಮುಯಿಕ್ (1970) ರ ಪ್ರಕಾರ ಕೃಷಿಯ ಇತಿಹಾಸದಲ್ಲಿ ಕಳೆಗಳ ಹತೋಟಿ ಮಾಡುವಿಕೆಯು ರೈತ ಮತ್ತು ಕಳೆಗಳ ನಡುವೆ ನಡೆಯುತ್ತಿರುವ ಘೋರವಾದ ಯುದ್ಧ ಎಚಿದು ಪರಿಗಣಿಸಿದ್ದಾರೆ.

ನಾಟಿ ಮಾಡಿದ ಕಬ್ಬಿನಲ್ಲಿ ಸರಿಯಾದ ಹಂತದಲ್ಲಿ ಸಮರ್ಪಕವಾಗಿ ಕಳೆಗಳನ್ನು ನಿರ್ವಹಣೆ ಮಾಡಿದ್ದಲ್ಲಿ ಕೂಳೆ ಬೆಳೆಯಲ್ಲಿ ಕಳೆಗಳ ನಿಯಂತ್ರಣ ಕಷ್ಟವಾಗುವುದಿಲ್ಲ. ಬೆಳೆಗಳ ಪರ್ಯಾವರ್ತನೆಯನ್ನು ಅನುಸರಿಸಿ ಕಳೆಗಳ ಹತೋಟಿ ಮಾಡುವುದು ಈ ಪದ್ಧತಿಯ ಮುಖ್ಯ ಅಸ್ತ್ರವಾಗಿದೆ. ಈ ರೀತಿ ಕಬ್ಬಿನಲ್ಲಿ ಬಿಳಿಕಸವನ್ನು ಹತೋಟಿಯಲ್ಲಿಡಲು ಬಿಳಿಕಸ ಬಾಧಿತ ಪ್ರದೇಶಗಳಲ್ಲಿ ಹತ್ತಿ, ಶೇಂಗಾ, ಅಲಸಂಧಿ ಅಥವಾ ಬೇರೆ ಯಾವುದೇ ಬಿಳಿಕಸಕ್ಕೆ ಆದ್ಯತೆ ನೀಡದೆ ಬೆಳೆಗಳನ್ನು ಬೆಳೆ ಪರ್ಯಾವರ್ತನೆಯಲ್ಲಿ ಬೆಳೆಯಬೇಕು. ಇದರ ಜೊತೆಗೆ ಚೆನ್ನಾಗಿ ಕಳಿತ ಸಾವಯವ ಗೊಬ್ಬರ ಉಪಯೋಗಿಸುವುದು, ನೀರಾವರಿ ಕಾಲುವೆ ಮತ್ತು ಬದುಗಳನ್ನು ಬೇಸಿಗೆಯಲ್ಲಿ ಸುಡುವುದು, ಹೊಲವನ್ನು ಸ್ವಚ್ಛವಾಗಿಡುವುದು, ಇವು ಕಳೆಯ ಸಂಖ್ಯೆ ಕಡಿಮೆ ಮಾಡಲು ಸಹಾಯಕಾರಿಯಾಗುವವು. ಕಳೆಗಳನ್ನು ಒಂದು ವರ್ಷ ಬಿಟ್ಟರೆ ಮುಂದೆ ಏಳು ವರ್ಷ ಕಳೆ ನಿಯಂತ್ರಣ ಮಾಡಬೇಕಾಗುವುದು. ಕಾರಣ ಕಳೆಯನ್ನು ಆರು ವಾರದೊಳಗೆ ಹತೋಟಿ ಮಾಡುವುದು ಮಹತ್ವದಾಗಿದೆ.

ರಾಸಾಯನಿಕ ಔಷಧಿಗಳಿಂದ ಕಳೆ ನಿಯಂತ್ರಣ :

ಕಬ್ಬು ಬೆಳೆಯುವ ಪ್ರಮುಖ ದೇಶಗಳಾದ ಬ್ರೆಜಿಲ್, ಕ್ಯೂಬಾ, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದಲ್ಲಿ ಕಳೆ ನಾಶಕಗಳನ್ನು ಬಳಸುವುದು ಸಾಮಾನ್ಯ ವಾಡಿಕೆ. ಆದರೆ ಭಾರತದಲ್ಲಿ ಕಳೆ ನಾಶಕಗಳನ್ನು ಉಪಯೋಗಿಸುವುದು ವಿಶೇಷವಾಗಿ ಕಬ್ಬಿನಲ್ಲಿ ಕಡಿಮೆವಿರುವುದು ಕಂಡುಬಂದಿದೆ. ಆದರೆ ಅನೇಕ ಸಂಶೋಧನೆಗಳ ಪ್ರಯೋಗಗಳಿಂದ

ಕಂಡುಬರುವುದೇನೆಂದರೆ ಕಳೆ ನಾಶಕಗಳನ್ನು ಉಪಯೋಗಿಸಿ ಕಬ್ಬಿನಲ್ಲಿ ಕಳೆ ನಿಯಂತ್ರಣ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದಾಗಿದೆ. ಕಳೆಯನ್ನು ಕೈಯಿಂದ ತೆಗೆಯುವ ಪೂರ್ವ ಅಂದರೆ ಕಳೆಚಿಟು ಉದಯಪೂರ್ವ ಕಳೆ ನಾಶಕಗಳನ್ನು ಬಳಸಿ ಕಳೆಗಳ ಚಿಗುರುವಿಕೆ ಮತ್ತು ಅವುಗಳ ಬೆಳೆವಣಿಗೆಯನ್ನು ಕುಂಠಿತಗೊಳಿಸಬಹುದೆಂದು ತಿಳಿದಿದೆ. ಭಾರತದಲ್ಲಿ ಸಾಮಾನ್ಯವಾಗಿ 2, 4–ಡಿ ಕಡಿಮೆ ವೆಚ್ಚಿನ ಕಳೆನಾಶಕವಾಗಿದೆ. ಪ್ರತಿ ಹೆಕ್ಟೇರಿಗೆ 2.5 ಕಿ.ಗ್ರಾಂ. 2, 4–ಡಿ ಉಪ್ಪನ್ನು 750 ಲೀ ನೀರಿನಲ್ಲಿ ಕರಗಿಸಿ ಕಬ್ಬು ನಾಟಿ ಮಾಡಿದ ನಂತರ, ಎಂಟು ವಾರಗಳ ನಂತರ ಹಾಗೂ ಮಗ್ಗಲು ಹರಿಯುವುದಕ್ಕಿಂತ ಮುಂಚೆ ಸಿಂಪರಣೆ ಮಾಡಬೇಕು. ಇದರಿಂದ ಬಹುತೇಕ ಎಲ್ಲ ವಾರ್ಷಿಕ ಕಳೆಯು ನಿಯಂತ್ರಿಸಬಹುದಾಗಿದೆ. ಇದರಂತೆ ಟ್ರಯಾಜಿನ ಗುಂಪಿಗೆ ಸೇರಿದ ಅಟ್ರಾಜಿನ, ಸಿಮಾಜಿನ ಮತ್ತು ಪ್ರೋಪೆಜಿನ ಸಾಮಾನ್ಯವಾಗಿ ಹೊಲಗಳಲ್ಲಿ ಉಪಯೋಗಿಸುತ್ತಿರುವ ಕಳೆ ನಾಶಕಗಳು. ಇವುಗಳನ್ನು ಕೂಡಾ ಪ್ರತಿ ಹೆಕ್ಟೇರಿಗೆ 2.5 ಕಿ.ಗ್ರಾಂ 750 ಲೀ. ನೀರಿನಲ್ಲಿ ಕರಗಿಸಿ ಕಬ್ಬು ನಾಟಿ ಮಾಡಿದ ನಂತರ, ಎಂಟು ವಾರಗಳ ನಂತರ ಹಾಗೂ ಮಗ್ಗಲು ಹರಿಯುವುದಕ್ಕಿಂತ ಮುಂಚೆ ಸಿಂಪರಣೆ ಮಾಡಬೇಕು. ಈ ಕಳೆನಾಶಕಗಳು ಕಬ್ಬಿಗೆ ಯಾವುದೆ ರೀತಿಯ ಹಾನಿ ಮಾಡದೆ ಬಹುತೇಕ ಕಳೆಗಳನ್ನು ನಾಶ ಮಾಡುವವು. ಕಳೆಗಳನ್ನು ಸ್ಪರ್ಶದಿಂದ ನಾಶ ಮಾಡುವ ಕಳೆನಾಶಕ ಗುಣವನ್ನು ಮಣ್ಣಿನಲ್ಲಿ ಉಳಿಸದ ಪ್ಯಾರಾಕ್ವಾಟ ಎಂಬ ಕಳೆನಾಶಕವನ್ನು ಮೊಳಕೆಯೊಡೆದ ಬೆಳೆಯಲ್ಲಿ ಕಳೆಗಳಿಗೆ ಮಾತ್ರ ನೇರವಾಗಿ ಪಡೆಯಬೇಕು. ಇದನ್ನು (2 ಕಿ.ಗ್ರಾಂ) 2, 4–ಡಿ (1 ಕಿ.ಗ್ರಾಂ) ಯೊಂದಿಗೆ ಬೆರೆಸಿ ಉಪಯೋಗಿಸಿದಾಗ ಹುಲ್ಲಿನ ಜಾತಿಯ ಮತ್ತು ದ್ವಿದಳ ಜಾತಿಯ ಕಳೆಗಳೆರಡನ್ನು ಸಮರ್ಥ ರೀತಿಯಲ್ಲಿ ಹತೋಟಿ ಮಾಡಬಹುದೆಂದು ಕಂಡು ಬಂದಿದೆ.

ಕಬ್ಬು ಅಂತರ ಬೆಳೆಯಲ್ಲಿ ವ್ಯಾಪ್ತಿಗೆ ಕಳೆ ನಾಶಕಗಳು:

ದ್ವಿದಳ ಬೆಳೆಗಳಾದ ಹೆಸರು ಮತ್ತು ಸೋಯಾ, ಅವರೆ, ಎಣ್ಣೆಕಾಳು ಬೆಳೆಗಳಾದ ಶೇಂಗಾ ಮತ್ತು ಸೂರ್ಯಕಾಂತಿ, ಏಕದಳ ಬೆಳೆಗಳಾದ ಗೋವಿನ ಜೋಳ ಮತ್ತು ಗೋದಿ, ಗಡ್ಡೆ ಬೆಳೆಗಳಾದ ಪೊಟ್ಯಾಟೋ, ಸಾಂಬಾರ ಪದಾರ್ಥ ಬೆಳೆಯಾದ ಈರುಳ್ಳಿ (ಉಳ್ಳಾಗಡ್ಡೆ)ಯನ್ನು ಸಾಮಾನ್ಯವಾಗಿ ಕಬ್ಬಿನಲ್ಲಿ ಅಂತರ ಬೆಳೆಯಾಗಿ ಬೆಳೆಯುತ್ತಾರೆ. ಕಳೆನಾಶಕಗಳಿಗೆ ಈ ಅಂತರ ಬೆಳೆಗಳು ತಡೆದುಕೊಳ್ಳುವುದು ಬಹಳ ಕಡಿಮೆ. ಅಲಸಂಧಿ, ಸೋಯಾ ಅವರೆ ಮತ್ತು ಸೂರ್ಯಕಾಂತಿ ಬೆಳೆಗಳ ಅಟ್ರಾಜೀನ್ ಕಳೆನಾಶಕವನ್ನು ಉಪಯೋಗಿಸಲೇಬಾರದು. ಕಬ್ಬಿಗೂ ಹಾಗೂ ಅಂತರ ಬೆಳೆಗಳಿಗೂ ಯಾವದೇ ತೊಂದರೆ ಕೊಡಲಾರದಂತಹ ಮತ್ತು ಪರಿಣಾಮಕಾರಿ ಕಳೆ ನಿಯಂತ್ರಣ ಮಾಡುವ ಕಳೆ ನಾಶಕಗಳನ್ನು ಗುರ್ತಿಸಬೇಕಾಗಿದೆ. ಅಲಾಕ್ಲೋರ(ಲ್ಯಾಸೋ) ಮತ್ತು ಲಿನ್ಯೂರಾನ್ ಕಳೆ ನಾಶಕಗಳು ದ್ವಿದಳ, ಎಣ್ಣೆ ಕಾಳುಗಳ ಮತ್ತು ಪೊಟ್ಯಾಟೋ ಅಂತರ ಬೆಳೆಯುವ ಕಬ್ಬಿಗೆ ಉಪಯುಕ್ತವೆಂದು ಕಂಡುಬಂದಿದೆ.

ರಸಾಯನಿಕ ಮಿಶ್ರಣ ಕೊಡುವ ವೇಳೆ, ಕೊಡುವ ಪದ್ದತಿ, ಪ್ರಮಾಣ, ಸಸ್ಯಗಲೂ ತೆಗೆದುಕೊಳ್ಳುವ ಪ್ರಮಾಣ ಮತ್ತು ಸಸ್ಯಗಳ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಕಳೆನಾಶಕವನ್ನು ಹೆಚ್ಚಿನ ಸಾಮರ್ಥ್ಯ ಪಡೆಯಲು ಆಯ್ಕೆ ಮಾಡುವುದು ಉತ್ತಮ.